**7ನೇ ತರಗತಿಯ ಕೋರ್ ವಿಷಯಗಳ CSAS ಪರೀಕ್ಷೆಯ ವಿಶ್ಲೇಷಣೆಯನ್ನು ಮಧುಗಿರಿ ಮತ್ತು ತುಮಕೂರು ಜಿಲ್ಲೆಯ ಪ್ರದೇಶಗಳನ್ನು ತೌಲನಿಕ ಅಧ್ಯಯನ**

## ಅಧ್ಯಯನದ ಗುರಿ ಮತ್ತು ಉದ್ದೇಶಗಳು

ಬದಲಾಗುತ್ತಿರುವ ಶೈಕ್ಷಣಿಕ ಆಶೋತ್ತರಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ವಿವಿಧ ಬೋಧನಾ ಕಲಿಕಾ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕೆಯ ವೇಗವನ್ನು ಮತ್ತು ಆಸಕ್ತಿ ಅರಿತು ಅವರು ನಿರ್ದಿಷ್ಟ ಕಲಿಕಾ ಫಲಿತಗಳನ್ನು ಹೊಂದುವಂತೆ ಮಾಡುವುದು ಅವಶ್ಯಕವಾಗಿದೆ.

ಅದಕ್ಕೆ ಪೂರಕವಾಗಿ ಶಿಕ್ಷಕರನ್ನು ಅಣಿಗೊಳಿಸುವ, ವಿದ್ಯಾರ್ಥಿಗಳನ್ನು ರೂಪಿಸುವ ಗುರುತರ ಜವಾಬ್ದಾರಿಯನ್ನು ನಾವೆಲ್ಲರೂ ವಹಿಸಿಕೊಳ್ಳಬೇಕಾಗಿದೆ. ಇದಕ್ಕೆ ಪೂರಕವಾಗಿ ಇಲಾಖೆಯು ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಕಲಿಕೆಯನ್ನು ಉತ್ತಮಪಡಿಸಲು ಹಾಗೂ ಕಲಿವಿನ ಅನುಭವಗಳನ್ನು ಪರಿಣಾಮಕಾರಿಯಾಗಿ ರೂಪಿಸಲು ಕಲಿಕಾ ತಂತ್ರಗಳನ್ನು ರೂಪಿಸಬೇಕಾಗಿದೆ. ಇದಕ್ಕಾಗಿ ಶಿಕ್ಷಕರು ವೃತ್ತಿಪರ ಕೌಶಲಗಳನ್ನು ಬೆಳೆಸುವುದರ ಜೊತೆಗೆ, ಶಿಕ್ಷಕರು ಮತ್ತು ಇಲಾಖೆಯ ಮುಖ್ಯಸ್ಥರಲ್ಲಿ ಆರೋಗ್ಯಕರ ಸ್ವರ್ಧೆ ಅಗತ್ಯ. ಈ ಕಾರಣಕ್ಕಾಗಿ ಇತರರೊಂದಿಗೆ ಹೋಲಿಕೆ ಸಹಜವಾಗಿ ಕಾರ್ಯ ಪ್ರವೃತ್ತರನ್ನಾಗಿಸುವಲ್ಲಿ ಸಹಕಾರಿ ಎಂದು ಗಮನಿಸಿ 2 ಜಿಲ್ಲೆಗಳ ಅಂದರೆ ತುಮಕೂರು ಮತ್ತು ಮಧುಗಿರಿ ಶೈಕ್ಷಣಿಕ ಜಿಲ್ಲೆಗಳಲ್ಲಿನ 7ನೇ ತರಗತಿಯ CSAS ಮತ್ತು 2019–2020 ನೇ ಸಾಲಿನ ಫಲಿತಾಂಶದೊಂದಿಗೆ ವಿಶ್ಲೇಷಣೆ ಮಾಡುವ ಕಾರ್ಯವನ್ನು ಕೈಗೊಳ್ಳಲಾಗಿದೆ.

## ಉದ್ದೇಶಗಳು

ವಿಷಯದ ಕಲಿಕೆಗನುಗುಣವಾಗಿ ಸೂಕ್ತ ಕಲಿಕಾ ಫಲಗಳನ್ನು ರೂಪಿಸುವ ಹಾಗೂ ಅವುಗಳನ್ನು ಪರಿಣಾಮಕಾರಿಯಾಗಿ ತರಗತಿಗಳಲ್ಲಿ ಅನುಷ್ಠಾನಗೊಳಿಸಿ ಮಗುವಿನ ಕಲಿಕೆಯನ್ನು ದೃಢಪಡಿಕೊಳ್ಳುವುದು ಪ್ರತಿಯೊಬ್ಬ ಶಿಕ್ಷಕರ ಆದ್ಯ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಶಿಕ್ಷಕರನ್ನು ಅಣಿಗೊಳಿಸುವುದರೊಂದಿಗೆ ಅರೋಗ್ಯಕರವಾದ ಸ್ಪರ್ಧೆಯೊಂದಿಗೆ ನಿಗದಿಪಡಿಸಿದ ಸಾಮರ್ಥ್ಯಗಳನ್ನು ಕಲಿಸುವಲ್ಲಿ ಇರುವ ತೊಂದರೆ ಮತ್ತು ಪರಿಹಾರೋಪಾಯಗಳನ್ನು ತಿಳಿಸುವ ಉದ್ದೇಶ ಇದಾಗಿದ್ದು 7ನೇ

ತರಗತಿಯ CSAS ಮತ್ತು 2019-2020 ನೇ ಸಾಲಿನ ಫಲಿತಾಂಶದೊಂದಿಗೆ ವಿಶ್ಲೇಷಣೆ ಮಾಡುವ ಕಾರ್ಯವನ್ನು ಕೈಗೊಳ್ಳಲಾಗಿದ್ದು ಈ ಕೆಳಗಿನ ಅಂಶಗಳನ್ನು ಪ್ರಮುಖವಾಗಿ ಗುರುತಿಸಲಾಯಿತು.

- ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಚಟುವಟಿಕೆ ಆಧಾರಿತ ವಿಶೇಷ ಪ್ರಕ್ರಿಯೆಯನ್ನು ಆಯೋಜಿಸುವುದು.
- ವಿದ್ಯಾರ್ಥಿಗಳು ತಮ್ಮ ಕಲಿಕಾ ಮಟ್ಟವನ್ನು ತಿಳಿದುಕೊಂಡು ಮುಂದಿನ ಕಲಿಕೆಯಲ್ಲಿ ತೊಡಗುವಂತೆ ಪ್ರೋತ್ಸಾಹಿಸುವುದು. ಮತ್ತು ಕಲಿಕೆಯನ್ನು ಪ್ರೋತ್ಸಾಹಿಸುವಂತಹ ಪರಿಸರವನ್ನು ಒದಗಿಸಿಕೊಡುವುದು.
- ಶಿಕ್ಷಕರು ತಮ್ಮ ತರಗತಿ ಪ್ರಕ್ರಿಯೆಯಲ್ಲಿನ ಕೊರತೆಗಳನ್ನು ಗುರುತಿಸಿಕೊಂಡು ಬದಲಾವಣೆ ಮಾಡಿಕೊಳ್ಳುವಂತೆ ಪ್ರೇರೇಪಿಸುವುದು. ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಚಟುವಟಿಕೆಗಳನ್ನು ಕೈಗೊಳ್ಳುವುದು.
- ವಿದ್ಯಾರ್ಥಿಗಳ ಮುಂದಿನ ಕಲಿಕೆಗೆ ಬೇಕಾದ ಸಬಲೀಕರಣವನ್ನು ನೀಡುವುದು. ಮತ್ತು ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಸ್ಪರ್ಧಾ ಮನೋಭಾವವನ್ನು ಬೆಳೆಸುವುದು.

**ಅಧ್ಯಯನಕ್ಕೆ ಸಂಬಂಧಿಸಿದ ಶಿಫಾರಸ್ಸುಗಳು :**

ಜಗದೆನ್ನ ಮುಟ್ಟಿಸದಬೇಕೆಂದು ಕೊರಗದಿರ
ಮಗುವುನೀಂ ಪೆತ್ತರ್ಗೆ, ಲೋಕಕ್ಕೆ ಸ್ಪರ್ಧಿ
ಹೆಗಲ ಹೊರೆ ಹುಟ್ಟಿದಗಳಲ್ಲ ಮೀರುತಿರೆ ನಿನ್ನ
ಗೊಡವೆಗಾರಿಗೆ ಬಿಡವೋ ॥ ಮಂಕುತಿಮ್ಮ॥ [8]

ಎಂಬ ಡಿ.ವಿ.ಜಿ, ಯವರ ಮಾತಿನಂತೆ ಮಕ್ಕಳು ಕಲಿಯದಿರುವುದಕ್ಕೆ ನಾವು ಅನೇಕ ಕಾರಣಗಳನ್ನು ಕೊಡಬಹುದು ಅವರವರದೇ ಆದ ಸಮಸ್ಯೆಗಳಿರುತ್ತವೆ. ಹಾಗೆ ಪ್ರತಿಯೊಂದು ಕೆಲಸಕ್ಕೂ ಅವರದೇ ಆದ ಸವಾಲುಗಳಿರುತ್ತವೆ. ಅವರವರದೇ ಕ್ಷೇತ್ರಗಳಲ್ಲಿ ಬರುವ ಸಮಸ್ಯೆ ಸವಾಲುಗಳನ್ನು ಸಮರ್ಪಕವಾಗಿ ಎದುರಿಸಿ ಪರಿಹಾರಿಸಿಕೊಳ್ಳಬೇಕಾದುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ನಮ್ಮ ವೃತ್ತಿ ಕ್ಷೇತ್ರದಲ್ಲಿ ಎದುರಿಸುತ್ತಿರುವ ಬಹುದೊಡ್ಡ ಸವಾಲದ 'ಗುಣಾತ್ಮಕ ಕಲಿಕಾ ಮಟ್ಟ

ತಲುಪುವಲ್ಲಿ' ಕಂಡುಕೊಳ್ಳಬಹುದಾದ ಪರಿಹಾರ ನಮ್ಮ ಜವಾಬ್ದಾರಿಯಾಗಿ, ಈ ಕೆಳ ಕಂಡ ಅಂಶಗಳನ್ನು ತಿಳಿಸಲಾಗಿದೆ.

- ಶಾಲೆಯಲ್ಲಿನ ತರಗತಿಗಳಿಗೆ ಅಗತ್ಯವಾದ ಕಲಿಕೋಪಕರಣಗಳನ್ನು ಹಾಗೂ ಪಾಠೋಪಕರಣಗಳನ್ನು ಜರೂರಾಗಿ ನೀಡುವುದು.
- ಶಿಕ್ಷಕರಿಗೆ ಕಾಲಕಾಲಕ್ಕೆ ಅಗತ್ಯ ತರಬೇತಿಗಳನ್ನು ಇಲಾಖಾ ವತಿಯಿಂದ ನೀಡಿ, ಮಕ್ಕಳ ಗುಣಾತ್ಮಕ ಕಲಿಕೆಗೆ ಸಹಕರಿಸುವಂತೆ ತರಬೇತಿ ನೀಡುವುದು.
- ಅಗತ್ಯ ಚಟುವಟಿಕೆಗಳನ್ನು ತರಗತಿ ಅವಧಿಯಲ್ಲಿ ಬೋಧಿಸುವ ಸಮಯದಲ್ಲಿ ನಿರೂಪಿಸಲು ಸೂಕ್ತ ಅವಧಿಗಳನ್ನು ಕಲ್ಪಿಸಲು ಸಮಯಾವಕಾಶವನ್ನು ನೀಡುವುದು/
- ಮಕ್ಕಳಿಗೆ ಓದು-ಬರಹದ ಜೊತೆಯಲ್ಲಿ ವೈಜ್ಞಾನಿಕ ಚಿಂತನೆಗಳಿಗೆ ಅವಕಾಶವನ್ನು ಕಲ್ಪಿಸಿಕೊಡುವುದು..
- ಗಣಿತ ವಿಷಯವನ್ನು ಸಂತಸದ ಕಲಿಕೆಯಾಗಿ ರೂಪಿಸಲು ಸಂಬಂಧಿಸಿದಂತೆ, ಸೂಕ್ತ ಟಿ.ಎಲ್.ಎಂ.ಗಳನ್ನು ಶಾಲೆಗಳಿಗೆ ಒದಗಿಸಿದಲ್ಲಿ ಮಕ್ಕಳ ಕಲಿಕೆಗೆ ಸಹಾಯವಾಗುವುದು.
- ಭೌತಿಕ ಪರಿಸರ, ಕಲಿಕಾ ಪರಿಸರ, ನಾಯಕತ್ವ, ಸಮುದಾಯದಲ್ಲಿ ಭಾಗವಹಿಸುವಿಕೆ, ನಾವಿನ್ಯಯುತ ಚಟುವಟಿಕೆಳಿಗೆ ಸಂಬಂಧಿಸಿದಂತೆ CSAS ಸಮೀಕ್ಷೆಯ ಆಧಾರದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿದಿಕೊಡುವುದು.
- ಶಾಲಾ ಗುಣಮಟ್ಟ ಮತ್ತು ಕಲಿಕಾ ಪ್ರಕ್ರಿಯೆಯ ಗುಣಮಟ್ಟವನ್ನು ಉತ್ತಮಪಡಿಸಲು ಪ್ರಚೋದಿಸುವುದು. ಶಾಲಾ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಭಾಗೀದಾರರ ಭಾಗವಹಿಸುವಿಕೆಯನ್ನು ದೃಢೀಕರಿಸುವುದು. ಸಮುದಾಯವನ್ನು ಪ್ರೋತ್ಸಾಹಿಸುವುದು.

ಶಾಲೆಯ ಸರ್ವತೋಮುಖ ಅಭಿವೃದ್ಧಿಯಲ್ಲಿ ನಾಯಕತ್ವ ಮಹತ್ವದ ಪಾತ್ರ ವಹಿಸುತ್ತದೆ. ಒಳ್ಳೆಯ ನಾಯಕನು ಶಾಲೆಯ ಶ್ರೇಯೋಭಿವೃಧ್ಧಿಗೆ ದಾರಿದೀಪವಾಗಿರುತ್ತಾನೆ. ಶಾಲೆಯ ಮುಖ್ಯ ಶಿಕ್ಷಕರು ಶಾಲೆಯಲ್ಲಿ ನಡೆಯುವ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳಿಗೆ ನಾಯಕರಾಗಿ ಸಕ್ರೀಯವಾಗಿ ಭಾಗಿಯಾಗುವುದು.

## ಅಧ್ಯಯನಕ್ಕೆ ಸಂಬಂಧಿಸಿದ ಶಿಫಾರಸ್ಸುಗಳು ಅನ್ವಯ ಇಲಾಖೆ ಕೈಗೊಳ್ಳಬಹುದಾದ ಕಾರ್ಯಗಳು

- ಪ್ರಾಥಮಿಕ ಶಿಕ್ಷಣದ ಗುಣಮಟ್ಟದ ಶಿಕ್ಷಣಕ್ಕಾಗಿ ಅಧ್ಯಯನದ ಫಲಶೃತಿಯೊಂದಿಗೆ ತಾಲ್ಲೂಕು – ಅಂತರಜಿಲ್ಲಾ ಶೈಕ್ಷಣಿಕ ಗುಣಮಟ್ಟದೊಂದಿಗೆ ಹೋಲಿಸಿ ಅನುಸರಿಸಬೇಕಾದ ನಿರ್ದಿಷ್ಟ ಕಾರ್ಯ ತಂತ್ರಗಳ ಕ್ರಿಯಾ ಯೋಜನೆ ರೂಪಿಸಿವುದು
- ಶೈಕ್ಷಣಿಕ ಗುಣಮಟ್ಟದ ತರಬೇತಿಗೆ ಡಯಟ್ ಅಧ್ಯಯನದ ಫಲಶೃತಿಯನ್ನು ಗಮನಿಸುವುದು ಮತ್ತು ಶಿಕ್ಷಕರಿಗೆ ಅಧ್ಯಯನದಲ್ಲಿ ಕಂಡುಬಂದ ಸಾಮಾರ್ಥ್ಯಗಳ ಕ್ಲಿಷ್ಟತೆಗೆ ಅನುಗುಣವಾದ ತರಬೇತಿಯನ್ನು ಆಯೋಜಿಸುವುದು.

  ಉದಾ: ಗಣಿತದ ಕಲಿಕೆ ಕಬ್ಬಿಣದ ಕಡಲೆ ಆಗದೆ ಸಂತಸದ ಕಲಿಕೆಯಾಗಿ ರೂಪಿಸಿ ಜೀವನದ ಅನುಭವದೊಂದಿಗೆ ಹೊಂದಿಕೊಳ್ಳುವಂತ ಚಟುವಟಿಕೆಗಳನ್ನು ರಚಿಸುವ ತರಬೇತಿಯನ್ನು ನೀಡುವುದು
- CSAS ಪರೀಕ್ಷೆಯ ಫಲಿತಾಂಶ ವಿಶ್ಲೇಷಣೆಯಲ್ಲಿ ಕಂಡುಬರುವ ಶೇ 40 ಕ್ಕಿಂತ ಕಡಿಮೆ ಸಾಮಾರ್ಥ್ಯಗಳಿಸಿರುವ ವಿದ್ಯಾರ್ಥಿಗಳಿಗೆ ಪರ್ಯಾಯ ಬೋಧನೆಗೆ ಮಾತ್ರ ಸೂಚಿಸದೆ ಅದಕ್ಕೆ ಸಂಬಂಧಿಸಿದ ಕಾರಣಗಳನ್ನು ಪಟ್ಟಿ ಮಾಡಿ ಶಾಲೆಯ ಮೂಲಭೂತ ಸೌಕರ್ಯ ಶಿಕ್ಷಕರಿಗೆ ತರಬೇತಿಯನ್ನು ಆಯೋಜಿಸುವುದರ ಮೂಲಕ ದೀರ್ಘಕಾಲದ ಪರಿಹಾರವನ್ನು ಕಂಡುಕೊಳ್ಳಬಹುದು.
- ಕಂಡುಕೊಳ್ಳಬಹುದು. ಆಧ್ಯಾಪಕರ ತರಬೇತಿ ಮತ್ತು ತರಬೇತಿ ಸಾಹಿತ್ಯ ತಯಾರಿಕೆಯನ್ನು ಸ್ಥಳೀಯ ಡಯಟ್‌ನೊಂದಿಗೆ ಸಮಲೋಚಿಸಿ ತಯಾರಿಸುವುದು. ಮತ್ತು ಶಿಕ್ಷಕರ ಸಲಹೆಯನ್ನು ಪಡೆಯುವುದು
- ಶಿಕ್ಷಕರಿಗೆ ಇತರೆ ಕೆಲಸಗಳ ಹೊರೆ ಹೆಚ್ಚಗಾದಂತೆ ಬೋಧನೆ / ಮಾರ್ಗದರ್ಶನಕ್ಕೆ ಹೆಚ್ಚು ಹೆಚ್ಚು ಅವಕಾಶ ಕಲ್ಪಿಸಿ ಕೊಡಬೇಕು.

ಅಧ್ಯಯನಕಾರರು

ದಿನೇಶ್.ಬಿ.ಕೆ
ಉಪನ್ಯಾಸಕರು
ಡಯಟ್ ಮಧುಗಿರಿ